ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಪರ ವಕೀಲರಿಂದಃ**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಪಿ 6 ಎಂದು ಸಾಕ್ಷಿಯ ಸಹಿಯುನ್ನು ನಿಪಿ 6 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ವಿಡಿಯೋ ಚಿತ್ರೀಕರಣವನ್ನು ತೋರಿಸಲಾಯಿತು. ಸದರಿ ವಿಡಿಯೋ ಚಿತ್ರೀಕರಣದಲ್ಲಿ ಯಾವುದೇ ಸಮಯ ಹಾಗೂ ದಿನಾಂಕ ನಮೂದು ಇರುವುದಿಲ್ಲ ಹಾಗೂ ಯಾವುದೇ ಮಾತುಕತೆ ಕೇಳಿ ಬರುವುದಿಲ್ಲ. ದಾಳಿಯ ಸಂದರ್ಭದಲ್ಲಿ ಮಾಡಿದೆ ಎನ್ನಲಾದ ವಿಡಿಯೋ ಚಿತ್ರೀಕರಣ ನ್ಯಾಯಾಲಯದ ಮುಂದೆ ಹಾಕಿ ಪ್ರದರ್ಶಿಸಲು ಹಾಕಿದಾಗ, ಸಾಕ್ಷಿಯು ಅದರಲ್ಲಿ ತಾನು ಕಂಡು ಬರುವುದಾಗಿ ಒಪ್ಪಿಕೊಂಡಿದ್ದು, ಸದ್ರಿ ವಿಡಿಯೋ ಚಿತ್ರೀಕರಣಕ್ಕೆ ನಾನು ಪೊಲೀಸರ ಕೋರಿಕೆಯ ಮೇರೆಗೆ ಹೋಗಿರುವುದಾಗಿ ಸ್ಥಳದಲ್ಲಿ ಏನು ಮಾಡಿದ್ದಾರೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ .

(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲು –ಮಾನ್ಯ ಸ.ಸ.ಅ. ರವರಿಂದ

ದಿನಾಂಕಃ 28–01–2025 ರಂದು ಚಾಸಾ 1 ರವರು ನಾನು ರಸ್ತೆಯಲ್ಲಿ ಹೋಗುತ್ತಿದ್ದಂತಹ ಸಂದರ್ಭದಲ್ಲಿ ಆರೋಪಿತನಿಗೆ ಸಂಬಂಧಿಸಿದ ಮನೆಯಲ್ಲಿ ದಾಳಿಯನ್ನು ಮಾಡುವ ಸಂದರ್ಭದಲ್ಲಿ ನನ್ನನ್ನು ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾನು ಹೋಗಿರುತ್ತೇನೆ ಎಂದರೆ ಸರಿಯಲ್ಲ, ಸದ್ರಿ ಸಂದರ್ಭದಲ್ಲಿ ಅವರು ನನ್ನನ್ನು ಹಾಗೂ ಚಾಸಾ 3 ರವರನ್ನು ಕರೆದುಕೊಂಡು ಆರೋಪಿತನಿಗೆ ಸಂಬಂಧಿಸಿದ ಮನೆಗೆ ಕರೆದುಕೊಂಡು ಹೋಗಿದ್ದು, ಆಗ ನಿಪಿ 1 ನ್ನು ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಆತನಿಗೆ ಸಂಬಂಧಿಸಿದ ಮನೆಯನ್ನು ಶೋಧಿಸಿದಾಗ ಅಲ್ಲಿ ಬೆಲ್ಲದ ಕೊಳೆ ದಾಸ್ತಾನಾನು ಇಟ್ಟಿರುವುದು ಕಂಡು ಬಂದವು ಎಂದರೆ ಸರಿಯಲ್ಲ.

ಪೊಲೀಸರು ಅದನ್ನು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ವಶಪಡಿಸಿಕೊಂಡು 9-15 ಗಂಟೆಯಿಂದ 10-15 ಗಂಟೆಯವರೆಗೆ ನಿಪಿ 2 ರಂತೆ ಪಂಚನಾಮೆಯನ್ನು ಮಾಡಿ ನಿಪಿ 3 ರಿಂದ 5 ದಾಖಲಾತಿಗಳನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಸಂದರ್ಭದಲ್ಲಿ ನಾನು ಭಾವಚಿತ್ರವನ್ನು ತೆಗೆಯಬೇಕು ಎಂದು ಚಾಸಾ 1 ರವರು ಕೇಳಿಕೊಂಡಾಗ ತಾನು ಬರುವುದಿಲ್ಲ ಎಂದು ಹೇಳಿದ್ದರೂ ಸಹ ನನ್ನ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲಾ .

ನಿಪಿ 1 ರಿಂದ 6 ರ ದಾಖಲಾತಿಗಳನ್ನು ನನ್ನ ಸಮಕ್ಷಮ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಹಾಗೂ ನಾನು ಒಂದೇ ಊರಿನವರಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು – ಆರೋಪಿ ಪರ ಶ್ರೀ.ಪಿ ಎಸ್ ಎನ್ ವಕೀಲರಿಂದ

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾ.ಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**C.W.** 02 **P.W.** 01

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ,**

**ಕುಮಟಾ**

**ಸಿ.ಸಿ.ನಂ. 1987**/2021

ಸಿ.ಡಬ್ಲ್ಯು 01

ಪಿ.ಡಬ್ಲ್ಯು 01

| | | |
|---|---|---|
| ಸಾಕ್ಷಿದಾರರ ಹೆಸರು | - | ಮೋಹಿನಿ |
| ಗಂಡನ ಹೆಸರು | - | ಸತೀಶ ಅಂಬಿಗ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ಮನೆ ಕೆಲಸ |
| ವಾಸ್ತವ್ಯ | - | ಸೊಂಡದ ಹಕ್ಕಲ ಕುಮಟಾ |

(ಇಂದು ದಿನಾಂಕಃ **06-03-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ- 2 ಹಾಗೂ 3ರವರ ಪರಿಚಯವಿದೆ. ಚಾಸಾ-4 ನನ್ನ ಗಂಡ, ಚಾಸಾ-5 ನನ್ನ ಮೈದುನ, ಚಾಸಾ-6 ನನ್ನ ಅತ್ತೆ ಚಾಸಾ-7 ನನ್ನ ಅಣ್ಣನಾಗಿರುತ್ತಾನೆ. ಆರೋಪಿತರ ಪರಿಚಯವಿದೆ. ಆರೋಪಿತರು ನಮ್ಮ ಮನೆಯ ಪಕ್ಕದ ಮನೆಯವರಾಗಿರುತ್ತಾರೆ.

ದಿಃ24.03.2022 ರಂದು ಬೆಳಿಗ್ಗೆ 08-00 ಗಂಟೆಯ ಸಮಯದಲ್ಲಿ ಚಾಸಾ-4 ಹಾಗೂ 5 ರವರು ಸಾರಾಯಿ ಕುಡಿಯಲು 1ನೇ ಆರೋಪಿತಳ ಮನೆಗೆ ಹೋಗಿದ್ದು, ಈ ಕುರಿತಾಗಿ ನನಗೆ ಹಾಗೂ 1ನೇ ಆರೋಪಿತಳಿಗೆ ಮಾತಿಗೆ ಮಾತಾಗಿ 1ನೇ ಆರೋಪಿತಳು ನನ್ನ ಬೆನ್ನಿಗೆ ಬಿಸಿ ನೀರಿನ್ನು

ಚೆಲ್ಲಿರುತ್ತಾಳೆ. ಈ ಕುರಿತಾಗಿ ನಾನು ಚಾಸಾ–4 ರವರಿಗೆ ವಿಷಯವನ್ನು ತಿಳಿಸಿರುತ್ತೇನ್ಠ ಆಗ ಅವರು ನನಗೆ ಬೇಡ ಪಕ್ಕದ ಮನೆಯವರಾಗಿರುತ್ತಾರೆ. ನೀನು ಸುದಾರಿಸಿಕೊಂಡು ಹೋಗು ತಿಳಿಸಿರುತ್ತಾರೆ.

ದಿಃ27.03.2022 ರಂದು ನಮ್ಮ ಮನೆಯ ಹತ್ತಿರ 4ಜನ ಆರೋಪಿತರು ನನಗೆ ಬಂದು ಹೊಡೆದಿರುತ್ತಾರೆ. ಆರೋಪಿತರು ನನ್ನನ್ನು ಉದ್ದೇಶಿಸಿ ರಂಡೆ ಸೂಳೆ ಎಂದು ನನ್ನ ಮೈ ಮೇಲೆ ಕೈ ಹಾಕಿ ಕೆಟ್ಟ ಶಬ್ದದಿಂದ ನನಗೆ ಬೈದು ನಾನು ಧರಿಸಿದ್ದ ಬಟ್ಟೆಯನ್ನು ಹರಿದುಹಾಕಿರುತ್ತಾರೆ. ನಂತರ ನನಗೆ ಬೆನ್ನಮೇಲೆ 4ನೇ ಆರೋಪಿತಳು ಕೋಲಿನಲ್ಲಿ ಹೊಡೆದಿರುತ್ತಾರೆ. 1ನೇ ಆರೋಪಿತಳು ನನಗೆ ಮೂಗಿನ ಮೇಲೆ ಹೊಡೆದಿರುವುದರಿಂದ ನನಗೆ ಎಡಕಿವಿಯಲ್ಲಿ ಹಾಗೂ ಮೂಗಿನಲ್ಲಿ ರಕ್ತ ಬಂದಿದ್ದು, ನನ್ನ ಕಣ್ಣು ಬಾದಿರುತ್ತದೆ. 2 ಹಾಗೂ 3ನೇ ಆರೋಪಿತರು ನನ್ನ ಬಟ್ಟೆಯನ್ನು ಹರಿದು ಹಾಕಿರುತ್ತಾರೆ. ನಾನು ನನಗೆ ಅದ ಹಲ್ಲೆಯ ಹಿನ್ನಲೆ ಸರಕಾರಿ ಆಸ್ಪತ್ರೆಗೆ ಬಂದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಾರವಾರ ಆಸ್ಪತ್ರೆಗೆ ಹೋಗಿರುತ್ತೆನ. ಈ ಕುರಿತಾಗಿ ನಾನು ದೂರನ್ನು ನೀಡಿರುತ್ತೆನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ–1 ಸಾಕ್ಷಿಯ ಸಹಿಯನ್ನು ನಿಪಿ–1ಎ ಗುರುತಿಸಲಾಯಿತು.

ದೂರನ್ನು ನೀಡಿದ ನಂತರ ಪೊಲೀಸರು ಘಟನಾ ಸ್ಥಳಕೆ ಪಂಚನಾಮೆಯ ಸಲುವಾಗಿ ಬಂದಿದ್ದು, ಅಲ್ಲಿ ಬಾವಚಿತ್ರವನ್ನು ತೆಗೆದಿರುತ್ತಾರೆ. ಆರೋಪಿತರು ಹಲ್ಲೆಗೆ ಉಪಯೋಗಿಸದ ಕೋಲನ್ನು ವಶಪಡಿಕೊಂಡಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ–2 ಸಾಕ್ಷಿಯ ಸಹಿಯನ್ನು ನಿಪಿ–2ಎ ಗುರುತಿಸಲಾಯಿತು. 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ನಿಪಿ–3 ಹಾಗಾ 4 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರತಿಸಿದ್ದು, ಅದನ್ನು ಮು.ಮಾ.1 ಎಂದು ಗುರತಿಸಲಾಯಿತು. ಸಾಕ್ಷಿಯ ಸಹಿಯನ್ನು ಮು.ಮಾ.1ಎ ಎಂದು ಗುರುತಿಸಲಾಯಿತು. ನಾನು ಪ್ರಸ್ತುತ ಆರೋಪಿತರಿಗೆ ಹೆದರಿಕೊಂಡು ನನ್ನ ಅಕ್ಕನ ಮನೆಯಲ್ಲಿ ವಾಸ್ತವ್ಯದಲ್ಲಿ ಇದ್ದೇನೆ.

ಸಾಕ್ಷಿಯು ಒಂದು ದಾಖಲತಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯು ಕಲಂ 164 ರನ್ವಯ ದಾಖಲಿಸಿಕೊಂಡ ದಾಖಲಾತಿಯನ್ನು ನಿಪಿ–5 ಎಂದು , ಸಾಕ್ಷಿಯ ಸಹಿಯನ್ನು ನಿಪಿ–5ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

1ನೇ ಆರೋಪಿತಳು ಚಾಸಾ–4 ಹಾಗೂ 5 ರವರಿಗೆ ಸರಾಯಿಯನ್ನು ನೀಡುತ್ತಿದ್ದು, ಅವರಿಗೆ ಸರಾಯಿಯನ್ನು ನೀಡಬೇಡಿ ಎಂದು 1ನೇ ಆರೋಪಿತಳಿಗೆ ಬುದ್ಧಿ ಹೇಳಿರುತ್ತೇನೆ ಎಂದರೆ ಸರಿ. ಈ ವಿಷಯದ ಕುರಿತಾಗಿ ಆರೋಪಿತರು ದ್ವೇಷದಿಂದ ಇದ್ದರು ಎಂದರೆ ಸರಿ.

**ಪಾಟೀ ಸವಾಲು –ಆರೋಪಿ ಪರ ಶ್ರೀ ಜಿ.ಜಿ.ಜಿ ವಕೀಲರಿಂದ**

ನಾನು 6 ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಮನೆಯಲ್ಲಿ ನಾನು ಚಾಸಾ–4 ರಿಂದ 6 ರವರ ಜೊತೆಗೆ ಇರುತ್ತೇನೆ. ನಾನು 1ನೇ ಆರೋಪಿತಳು ಸರಾಯಿ ಮಾರಾಟ ಮಾಡುವ ಕುರಿತಾಗಿ ಪೊಲೀಸರಿಗೆ ಹಾಗೂ ಅಬಕಾರಿ ಇಲಾಖೆಯವರಿಗೆ ದೂರನ್ನು ನೀಡಿರುವುದಿಲ್ಲ. 1ನೇ ಆರೋಪಿತಳು ನನ್ನ ಬೆನ್ನಿಗೆ ಬಿಸಿನೀರನ್ನು ಹಾಕಿದಾಗ ಯಾವುದೇ ಗಾಯವಾಗಿರುವುದಿಲ್ಲ. ಈ ಕುರಿತಾಗಿ ನಾನು ಚಿಕಿತ್ಸೆಯನ್ನು

ಪಡೆದುಕೊಂಡಿರುತ್ತೇನೆ. ನಾನು ದಿನಾಂಕ 28 ರಂದು ಕುಮಟಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನು ಪಡೆದುಕೊಂಡಿರುತೇನೆ. ನಮ್ಮ ನಡುವೆ 2ನೇ ಸಲ ಗಲಾಟೆಯಾಧ ಸಂದರ್ಭದಲ್ಲಿ ಚಾಸಾ-4 5 ರವರು ನನ್ನ ಜೊತೆ ಇದ್ದರು. ಆರೋಪಿತರು 5.30 -06.00 ಗಂಟೆಯ ನಡುವೆ ಗಲಾಟೆ ಮಾಡಿರುತ್ತಾರೆ. ಸುಮಾರು ಸಮಯಗಳ ವರೆಗೆ ಗಲಾಟೆಯು ನಡೆದಿರುತ್ತದೆ. ಗಲಾಟೆ ನಡೆಯುವ ಸಂದರ್ಭದಲ್ಲಿ ಅಕ್ಕಪಕ್ಕದ ಮನೆಯವರು ಬಂದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಗಲಾಟೆಯ ಸಂದರ್ಭದಲ್ಲಿ ಕಿವಿಯಿಂದ ಬಂದಂತಹ ರಕ್ತವನ್ನು ಬಟ್ಟೆಯಿಂದ ಒರೆಸಿಕೊಂಡಿರುತ್ತೇನೆ. ನಾನು ಒರೆಸಿಕೊಂಡ ಬಟ್ಟೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ನನ್ನ ಹರಿದ ಬಟ್ಟೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಾನು ಘಟನೇಯ ಮಾರನೇ ದಿನ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ನಾನು ಈ ಗಲಾಟೆಯ ವಿಷಯವಾಗಿ ಹೇಳಿರುತ್ತೇನೆ.

ನಾನು ಕಾರವಾರ ಆಸ್ಪತ್ರೆಗೆ ದಿನಾಂಕ 31ರಂದು ಹೋಗಿರುತ್ತೇನೆ. ಕಾರವಾರ ಆಸ್ಪತ್ರೆ ನನ್ನನ್ನು ಅಕ್ಕ ಭಾವ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾನು ಒಂದು ದಿನ ಒಳ ರೋಗಿ ಇದ್ದೇನು. ನಮ್ಮ ಮನೆಗೆ 3-4 ರಂದು 2 ಜನ ಪೊಲೀಸರು ಬಂದಿದ್ದರು. ನಿಪಿ-2 ನ್ನು ನಮ್ಮ ಮನೆಯ ಬಳಿ ಪೊಲೀಸರು ಬರೆದಿರುತ್ತಾರೆ. ಮು.ಮಾ.1ನ್ನು ನಾನು ನಂತರದಲ್ಲಿ ಪೊಲೀಸ ಠಾಣೆಗೆ ನೀಡಿರುತ್ತೇನೆ. ಆರೋಪಿತರು ನನಗೆ ಅವಾಚ್ಯ ಶಬ್ದದಿಂದ ಬೈಯಲಿಲ್ಲ ಎಂದರೆ ಸರಿಯಲ್ಲ. ದಿಃ24.03.2022 ರಂದು ಯಾವುದೇ ಗಲಾಟೆ ನಡೆಯಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿತಳು ನನಗೆ ಬಿಸಿನೀರನ್ನು ಚೆಲ್ಲಲಿಲ್ಲ ಎಂದರೆ ಸರಿಯಲ್ಲ. ದಿಃ27.03.2022 ರಂದು ಆರೋಪಿತರು ಅಕ್ರಮ ಪ್ರವೇಶ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ27.03.2022 ರಂದು ಆರೋಪಿತರು ನನಗೆ ಅವಾಚ್ಯ ಶಬ್ದದಿಂದ ಬೈದ್ದು ನನ್ನ ಬಟ್ಟೆಯನ್ನು ಹರಿದು ಮಾನಕ್ಕೆ ಕುತ್ತು ಬರುವಂತಹ ಯಾವುದೇ ಕೃತ್ಯವನ್ನು ಮಾಡಲಿಲ್ಲ ಎಂದರೆ ಸರಿಯಲ್ಲ. ನನಗ ಈ ಘಟನೆಯಿಂದ

ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ನಾನು ಕುಮಟಾ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆಯನ್ನು ಪಡೆಯಲಿಲ್ಲ ಎಂದರೆ ಸಂರಿಲ್ಲ. ನಾನು ಆರೋಪಿತರಿಂದ ಹಣವನ್ನು ಪಡೆದುಕೂಳ್ಳುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ. ಪೊಲೀಸರು ನಿಪಿ–2ನ್ನು ಘಟನಾ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ. ಕುಮಟಾ